## ಹರಪನಹಳ್ಳಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ

ಓ ಎಸ್ ಃ 280/2013

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಎಮ್ ಆರ್ ನಾಗರಾಜ | ಪಿ ಡಬ್ಲ್ಯೂಃ | 1 |
| ತಂದೆಯ ಹೆಸರು | ಃ ಲೇಟ್ ರಾಮಣ್ಣ | ಡಿ ಡಬ್ಲ್ಯೂಃ | |
| ವಯಸ್ಸು | ಃ 46 ವರ್ಷ | ಪ್ರಮಾಣ ವಚನ ನೀಡಲಾದ | |
| ಉದ್ಯೋಗ | ಃ ತಹಶೀಲ್ದಾರರು | ದಿನಾಂಕಃ | 30.04.2014 |
| ವಾಸಸ್ಥಳ | ಃ ಹರಪನಹಳ್ಳಿ | | |

ಮುಖ್ಯ ವಿಚಾರಣೆ ಃ ಪ್ರತಿವಾದಿ ಪರ ಶ್ರೀ ಬಿ ಅರ್ ಜಿ ವಕೀಲರಿಂದಃ

ನಾನು ದಿ.07.03.2014 ರಿಂದ ಇಲ್ಲಿಯವರೆಗೆ ಹರಪನಹಳ್ಳಿ ತಾಲ್ಲೂಕು ಕಛೇರಿಯಲ್ಲಿ ತಹಶೀಲ್ದಾರರಾಗಿ ಸೇವೆ ಸಲ್ಲಿಸುತ್ತಿದ್ದೇನೆ. ನ್ಯಾಯಾಲಯದ ಸಮನ್ಸ್ ಬಂದ ಮೇರೆಗೆ ಈ ದಾವೆಗೆ ಸಂಬಂಧಿಸಿದಂತೆ ಪ್ರತಿವಾದಿ ಪರ ವಕೀಲರು ಕೇಳಿದ ಎಲ್ಲ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. 2011 ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿನ ಅನರ್ಹ ಫಲಾನುಭವಿಗಳ ಪಟ್ಟಿಯ ದೃಡಿಕೃತನ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.2 ಎಂದು ಗುರುತಿಸಲಾಯಿತು. 1ನೇ ಪ್ರತಿವಾದಿ ವಿಶಾಲಕ್ಷಮ್ಮ ರವರ ಹೆಸರಿಗೆ ಮಂಜೂರಾದ ನಿವೇಶನದ ಸಂಖ್ಯೆ 183 ರ ಹಕ್ಕುಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿದಲ್ಲು ಅದನ್ನು ನಿಡಿ.3 ಎಂದು ಗುರುತಿಸಲಾಯಿತು. 2012 ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿನ ಅರ್ಹರ ಫಲಾನುಭವಿಗಳ ಪಟ್ಟಿಯ ದೃಡಿಕೃತನ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.4 ಎಂದು ಗುರುತಿಸಲಾಯಿತು. ಆಶ್ರಯ ಯೋಜನೆಯಡಿಯಲ್ಲಿ ನಿರ್ಮಿಸಿರುವ ಮನೆಗಳಿಗೆ ವಿದ್ಯುತ ಸಂಪರ್ಕ ಕಲ್ಪಿಸಲು ಕೋರಿಕೊಂಡ ಪತ್ರ ಮತ್ತು ಪಲಾನುಭವಿಗಳ ಹೆಸರುಗಳ ಪಟ್ಟಿಯ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.5 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ಸಿ ಜಿ ವಕೀಲರಿಂದ ಃ

ಮನೆ ಸಂಖ್ಯೆ.183 ಕ್ಕೆ ನಾನು ಹಾಜರುಪಡಿಸಿದ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳು ನಮ್ಮ ಕಛೇರಿಯಲ್ಲಿ ಲಭ್ಯ ಇರುತ್ತವೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

O.S: 29/2014
P W : 2
Date: 14.01.2015

ಸಿವಿಲ್ ಜಡ್ಜ್ , ಹರಪನಹಳ್ಳಿ.

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು. ದಿನಾಂಕಃ06.01.2015

ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಪರ ಶ್ರೀ ಕೆಬಿಆರ್ ವಕೀಲರಿಂದ ಃ

ನಾನು ಈ ದಾವೆಯಲ್ಲಿ ವಾದಿ ಸಾಕ್ಷಿ ಇರುತ್ತೇನೆ. ನಾನು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ವಿಷಯ ನಿಜ ಮತ್ತು ಸತ್ಯ ಇರುತ್ತವೆ. ಆದ್ದರಿಂದ ಸದರಿ ಪ್ರಮಾಣ ಪತ್ರವನ್ನು ನನ್ನ ಮುಖ್ಯ ಸಾಕ್ಷ್ಯವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಮ್ಎಮ್ಎನ್ ವಕೀಲರಿಂದಃ

ಪಾಟೀ ಸವಾಲು ಮಾಡಲು ಸಮಯ ಕೇಳಿರುತ್ತಾರೆ , ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಸಿವಿಲ್ ಜಡ್ಜ್ , ಹರಪನಹಳ್ಳಿ.

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು. ದಿನಾಂಕಃ14.01.2015

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಕೆವಿ ವಕೀಲರಿಂದಃ

ನನ್ನ ಅಣ್ಣ ಮುದಿಮಲ್ಲಪ್ಪ 1974 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾನೆ. ಅವನ ಹೆಂಡತಿ ಜೀವಂತ ಇರುತ್ತಾಳೆ. ನನ್ನ ಅಣ್ಣ ಮತ್ತು ನಾನು ಒಡಹುಟ್ಟಿದ ಅಣ್ಣ ತಮ್ಮಂದಿರು ಎಂದರೆ ಸರಿ. ನಮಗೆ ಒಟ್ಟು 10 ಎಕರೆ ಜಮೀನು ಇದ್ದು ಅದರಲ್ಲಿ 3 ಎಕರೆ ಜಮೀನನ್ನು ನನ್ನ ಅಣ್ಣ ಮಾರಾಟ ಮಾಡಿರುತ್ತಾನೆ 7ಎಕರೆ ಜಮೀನು ಇರುತ್ತದೆ ಸದರಿ ಜಮೀನನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇರುವುದಿಲ್ಲ. ನಾನು ಮತ್ತು ನನ್ನ ಅಣ್ಣ 1958 ನೇ ಸಾಲಿನಲ್ಲಿ ಆಸ್ತಿಗಳಲ್ಲಿ ಪಾಲುವಿಭಾಗ ಮಾಡಿಕೊಂಡಿರುತ್ತೇವೆ. ನನಗೆ ಮತ್ತು ನನ್ನ ಅಣ್ಣನಿಗೆ ತಲಾ 3 ಎಕರೆ ಜಮೀನು ನಮ್ಮ ನಮ್ಮ ಹಿಸ್ಸೆಗೆ ಬಂದಿರುತ್ತದೆ. ಸದರಿ ಪಾಲುವಿಭಾಗವನ್ನು ಬರವಣಿಗೆ ಮೂಲಕ ಮಾಡಿಕೊಂಡಿರುತ್ತೇನೆ ಸದರಿ ಪತ್ರ ನನ್ನ ಹತ್ತಿರ ಇರುತ್ತದೆ. ನನ್ನ ಅಣ್ಣ ಮುದಿಮಲ್ಲಪ್ಪನಿಗೆ 3 ಜನ ಗಂಡು ಮಕ್ಕಳು ಮತ್ತು 2 ಹೆಣ್ಣು ಮಕ್ಕಳು ಇದ್ದರು. ಇವರುಗಳಲ್ಲಿ 3 ಜನ ಗಂಡು ಮಕ್ಕಳು ತೀರಿಕೊಂಡಿರುತ್ತಾರೆ 2 ಹೆಣ್ಣು ಮಕ್ಕಳು ಜೀವಂತ ಇರುತ್ತಾರೆ. ನನ್ನ ಅಣ್ಣ ಮುದಿಮಲ್ಲಪ್ಪ ಇತನು ತನ್ನ ಹಿಸ್ಸೆಗೆ ಬಂದ 3 ಎಕರೆ

ಜಮೀನನ್ನು ಜಟ್ಟಂಗಿ ಭೀಮಪ್ಪ ಇತನಿಗೆ ಮಾರಾಟ ಮಾಡಿರುತ್ತಾನೆ ಯಾವ ವರ್ಷದಲ್ಲಿ ಮಾರಟ ಮಾಡಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ನನ್ನ ಅಣ್ಣನಿಗೆ ಯಾವುದೇ ಆಸ್ತಿಗಳು ಉಳಿದಿರುವುದಿಲ್ಲ. ನನ್ನ ಅಣ್ಣ ಮುದಿಮಲ್ಲಪ್ಪ ಇತನು ನನ್ನ ಮಗ ವಾದಿ ನಿಂಗರಾಜನಿಗೆ ದಾನಪತ್ರ ಮಾಡಿದ ಆಸ್ತಿಯು ಯಾವ ಆಸ್ತಿ ಇರುತ್ತದೆ ಎಂದರೆ ಸಾಕ್ಷಿಯು ನನ್ನ ತಾಯಿ ಹುಚ್ಚಮ್ಮಳಿಂದ ಬಂದ ಆಸ್ತಿ ಇರುತ್ತದೆ ಎಂದು ಹೇಳುತ್ತಾರೆ. 1958 ನೇ ಸಾಲಿನಲ್ಲಿ ನಾವು ಪಾಲುವಿಭಾಗ ಮಾಡಿಕೊಳ್ಳುವಾಗ ನನ್ನ ತಾಯಿ ಜೀವಂತ ಇದ್ದಳು ಅವಳು 1998 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾಳೆ. ಸದರಿ ಆಸ್ತಿಯು ಅವಳ ಸ್ವಂತ ಆಸ್ತಿ ಇರುತ್ತದೆ. ದಾನಪತ್ರದಲ್ಲಿ ನನ್ನ ತಾಯಿ ಹುಚ್ಚವ್ವಳ ಸಹಿ ಇರುತ್ತದೆ. ದಾನಪತ್ರ ನಿಪಿ.1ನ್ನು ಮಾಡುವ ಕಾಲಕ್ಕೆ ನಾನು ಹಾಜರಿರಲಿಲ್ಲ. ಸದರಿ ನಿಪಿ.1 ಯಾರ ಹತ್ತಿರ ಇದೆ**?** ಎಂದರೆ ಸಾಕ್ಷಿಯು ನನ್ನ ಹತ್ತಿರ ಇತ್ತು ಎಂದು ಹೇಳುತ್ತಾರೆ. ದಾನಪತ್ರ ನಿಪಿ.1 ರಲ್ಲಿ 1.88 ಸೆಂಟ್ಸ್ ಜಮೀನು ಮತ್ತು 49ಥ39 ಖಣದ ಕುರಿತು ದಾನಪತ್ರ ಮಾಡಿರುತ್ತಾರೆ. ದಾನಪತ್ರ ನಿಪಿ.1 ನ್ನು ಮಾಡುವುದಕ್ಕಿಂತ ಪೂರ್ವದಲ್ಲಿ ಸದರಿ ಖಣವು ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ನನ್ನ ತಾಯಿಯ ಹೆಸರಿನಲ್ಲಿ ಇತ್ತು ಎಂದು ಹೇಳುತ್ತಾರೆ. ವಾದಿ ನಿಂಗರಾಜ ಈಗ ನನ್ನ ಹತ್ತಿರವೇ ವಾಸವಾಗಿದ್ದಾನೆ. ಸದರಿ ನಿಂಗರಾಜ ಇತನು ಕೂಲಿ ಕೆಲಸ ಮಾಡುತ್ತಾನೆ ಮತ್ತು ಅವನು ಕಳೆದ 12 ವರ್ಷಗಳಿಂದ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾನೆ. ಖಣದ ಕುರಿತು ಪಂಚಾಯತ ಬೋರ್ಡ್‌ನವರು ದಾನಪತ್ರವನ್ನು ಮಾಡುವುದಕ್ಕಿಂತ ಪೂರ್ವದಲ್ಲಿ ಡೋರ್ ಸಂಖ್ಯೆ ಕೊಟ್ಟಿರುತ್ತಾರೆಯೇ**?** ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ.1 ನ್ನು ನನ್ನ ಅಣ್ಣ ಮುದಿಮಲ್ಲಪ್ಪ ವಾದಿಗೆ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಗ ಸೇರಿಕೊಂಡು ನಿಪಿ.1 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ನನ್ನ ಅಣ್ಣನ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ಮುದಿಮಲ್ಲಪ್ಪ ತೀರಿಕೊಂಡ ನಂತರ ನನ್ನ ತಾಯಿಯ ಎಲ್ಲ ಆಸ್ತಿಗಳನ್ನು ಕಬಳಿಸುವ ಸಲುವಾಗಿ ನಿಪಿ.1 ನ್ನು ಸುಳ್ಳಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ನಮೂಧಿಸಿದ ಖಣವು ನನ್ನ ತಾಯಿಗೆ ಸಂಬಂಧಿಸಿದ ಖಣ ಇರುವುದಿಲ್ಲ ಮತ್ತು ಅದು ಸರ್ಕಾರಿ ಖಣ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಅಣ್ಣನ ಹೆಂಡತಿ ಸಾಕಮ್ಮ ಇವಳು ನನ್ನ ವಿರುದ್ಧ ಪಾಲುವಿಭಾಗ ಕೋರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾಳೆ ಎಂದರೆ ಸರಿ. ನನ್ನ ಅಣ್ಣ ಮುದಿಮಲ್ಲಪ್ಪ ಜೀವಂತ ಇದ್ದಾಗಲೇ ಅವನ ಹೆಂಡತಿ ಸದರಿ ಖಣದಲ್ಲಿ ಮನೆಯನ್ನು ಕಟ್ಟಿಕೊಂಡು ಅಲ್ಲಿಯೇ ವಾಸವಾಗಿರುತ್ತಾಳೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನನ್ನ ಅಣ್ಣ ಮುದಿಮಲ್ಲಪ್ಪ ಇತನು ನಿಪಿ.1 ರ ಪ್ರಕಾರ ದಾನಪತ್ರವನ್ನು ಮಾಡಿಕೊಟ್ಟಿವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ನಾವು ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿಯಿದೆ.

O.S: 29/2014
P W : 2
Date: 14.01.2015

ಸಿವಿಲ್ ಜಡ್ಜ್ , ಹರಪನಹಳ್ಳಿ.